2. ದಿನಾಂಕ 14ನೇ ಜನವರಿ, 2004 ರಂದು ಬೆಳಿಗ್ಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ
3. 8.01.2004 ರಿಂದ ಬೆಳಿಗ್ಗೆ 10.30 ರಿಂದ ಸಾಯಂಕಾಲ 6.00 ಗಂಟೆಯವರೆಗೆ ಕಾರ್ಯಕಲಾಪಗಳು ನಡೆಯಲಿವೆ.
4. ಪ್ರತಿದಿನ ವಿರಾಮದ ನಂತರ ಒಂದು (ಆಧ್ಯಾದೇಶಗಳಿಗೆ ಸಂಬಂಧಿಸಿದ ಅಥವಾ ಅತೀ ಜರೂರು ವಿಧೇಯಕ) ವಿಧೇಯಕವನ್ನು ಪರ್ಯಾಯಲೋಚನೆಗೆ ತೆಗೆದುಕೊಳ್ಳಲಾಗುವುದು.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.

ಈಗ ಸದನ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳುವುದು (ಸಭೆಯು ಮಧ್ಯಾಹ್ನ 1 ಗಂಟೆ 47 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 3.22 ಗಂಟೆಗೆ ಪುನಃ ಸಮಾವೇಶಗೊಂಡಿತು ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ಸಭೆಯ ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಹಲವಾರು ಸಂದರ್ಭಗಳಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ, ಇದಕ್ಕೆ ಕಡಿವಾಣ ಹಾಕಬೇಕು, ಸದನವನ್ನು ಏತಕ್ಕೆ ನಡೆಸಬೇಕು, ಆಡಳಿತ ಪಕ್ಷದ ಹಾಗೂ ವಿರೋಧಪಕ್ಷದ ಹಣೆಬರಹ ಅಷ್ಟೆ. ಇಲ್ಲಿ ಎಂಥಹ ಗಹನವಾದ ಚರ್ಚೆ ನಡೆಯುತ್ತಿದೆ, ಹಳ್ಳಿಯಲ್ಲಿ ಪಂಚಾಯಿತಿ ಅಥವಾ ಸೊಸೈಟಿಯಲ್ಲಿ ಸಭೆಯಲ್ಲಿ ಕೋರಂ ಇಲ್ಲದೆ ಇದ್ದರೆ ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳುತ್ತೇವೆ. ಇಲ್ಲಿ ಕೋರಂಗೆ 25–26 ಸದಸ್ಯರಿಗಬೇಕೆಂದಿಗೆ ಅಷ್ಟು ಸದಸ್ಯರು ಇರುವುದಿಲ್ಲ. 20 ನಿಮಿಷದವರೆಗೆ ಬೆಲ್ ಬಾರಿಸಿದೆ. ಈ ಬಗ್ಗೆ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಅಧಿವೇಶನವನ್ನು ಏತಕ್ಕೆ ನಡೆಸಬೇಕು? ಖರ್ಚಾದರೂ ಉಳಿಯುತ್ತದೆ, ಜನರ ಹಣವನ್ನು ಏತಕ್ಕೆ ವೇಸ್ಟ್ ಮಾಡಬೇಕು? ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ವಿಸರ್ಜಿಸುತ್ತೇವೆಂದು ಹೇಳುತ್ತಿದ್ದರು, ವಿಸರ್ಜಿಸಿ; ಇದನ್ನು ನೋಡಿದರೆ ಬೇಜಾರು ಅನಿಸುತ್ತದೆ 25 ನಿಮಿಷ ಬೆಲ್ ಹೊಡೆಯುತ್ತಿದೆ, ನಮ್ಮ ಕಡೆ ಕುರ್ಚಿಗಳು ಖಾಲಿ ಇವೆ. ನಿಮ್ಮ ಕಡೇನೂ ಕುರ್ಚಿಗಳು ಖಾಲಿ ಇದಾವೆ .

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ತಾವು ಗ್ಯಾರಂಟಿ ಕೊಟ್ಟರೆ ವಿಸರ್ಜನೆ ಮಾಡಬಹುದು (ನಗು)

ಶ್ರೀ ಎಸ್.ಎಸ್. ಪಾಟೀಲ್ : ನಾವು ನೀವು ಕೂಡೇ ಆರಿಸಿ ಬಂದರೆ ಅದನ್ನು ಹೇಳಬಹುದು, ಏನಾಗುತ್ತದೆ ಎಂಬುದು ಯಾರಿಗೆ ಗೊತ್ತಿದೆ.

ಅಧ್ಯಕ್ಷರು : ಸದಸ್ಯರುಗಳಿಗೆ ಜವಾಬ್ದಾರಿ ಇದೆ, ಅವರು ಅರಿತುಕೊಳ್ಳಬೇಕು, ನಾವು ಹೇಳುವ ಪರಿಸ್ಥಿತಿ ಇಲ್ಲ ಅವರಿಗೆ ಈ ವಿಷಯವೆಲ್ಲಾ ಗೊತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ಇದಕ್ಕೆ ಕಡಿವಾಣ ಹಾಕಬೇಕು, ಸದನದಲ್ಲಿ ತಮಗೆ ಅಧಿಕಾರವಿದೆ ಸದನದಲ್ಲಿ ಸದಸ್ಯರುಗಳೇ ಇಲ್ಲದಿದ್ದರೆ ಏನು ಮಾತನಾಡುವುದು? ಯಾರಿಗೆ ಮಾತನಾಡುವುದು?

ಅಧ್ಯಕ್ಷರು : ಯಾವ ರೀತಿ ಕಡಿವಾಣ ರೂಲ್ಸ್‌ನಲ್ಲಿ ಕೊರಂ ಇದ್ದಾಗ ಸದನ ನಡೆಸಬೇಕೆಂದು ಮಾಡಿಕೊಂಡಿದ್ದೇವೆ, ಕೊರಂ ಇದ್ದಾಗ ನಾವು ಸದನವನ್ನು ನಡೆಸಬಹುದಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ದುರ್ದೈವ.

4) ನಿಯಮ 69ರ ಮೇರೆಗೆ

ವಿಷಯ : ರಾಜ್ಯ ಹಾಗು ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ನಕಲಿ ಛಾಪಾ ಕಾಗದ ಹಗರಣದ ಬಗ್ಗೆ – ಮುಂದುವರೆದ ಚರ್ಚೆ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ನಕಲಿ ಛಾಪಕಾಗದಗಳ ವಿಚಾರ ನಾವೆಲ್ಲರೂ ತಿಳಿದಿರುವಂತೆ ಸುಮಾರು ನಾಲ್ಕುವರ್ಷಗಳಿಂದ ಈ ರಾಜ್ಯದಲ್ಲಿ ದೊಡ್ಡ ಹಾವಳಿಯಾಗಿದೆ. ಕೊನೆಯಪಕ್ಷ ಮಹಾರಾಷ್ಟ್ರದಲ್ಲಿ ಈ ವಿಚಾರದಲ್ಲಿ ಉಪ ಮುಖ್ಯಮಂತ್ರಿಗಳು, ಗೃಹಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ ಮುಂಬೈ ಪೊಲೀಸ್ ಕಮಿಷನರ್‌ರವರು ಹಿಂದೆ ಕೇಂದ್ರ ಸರಕಾರದ ದೊಡ್ಡ ದೊಡ್ಡ ಸ್ಥಾನದಲ್ಲಿದ್ದವರು, ಅವರು ಪ್ರಧಾನ ಮಂತ್ರಿಗಳ ಕಛೇರಿಯಲ್ಲಿದ್ದಂಥವರು ಅವರ ಮೇಲೆ ಇವತ್ತು ಆರೋಪ ಬಂದು ಇವತ್ತು ಅವರನ್ನು ರಜದ ಮೇಲೆ ಕಳುಹಿಸಿದ್ದಾರೋ ಅಥವಾ ಅಮಾನತ್ತು ಮಾಡಿದ್ದಾರೋ ಗೊತ್ತಿಲ್ಲ. ಆ ರಾಜ್ಯದಲ್ಲೂ ಕೂಡ ವಿವಾದ ಎದ್ದಿದೆ. ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಅಷ್ಟೇ ತೀಕ್ಷ್ಣಗತಿಯ ಪರಿಸ್ಥಿತಿ ಇದ್ದರೂ ಇದುವರೆಗೆ ಮೊನ್ನೆ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದು ಬಿಟ್ಟರೆ, ಯಾವುದೇ ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ, ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಅದಕ್ಕೆ ಬದಲಾಗಿ ದೊಡ್ಡ ದೊಡ್ಡ ಮುಖಂಡರುಗಳ ಸಂಬಂಧ ಕರೀಂಲಾಲ್ ಜೊತೆಗೆ ದಿನೇದಿನೇ ಕಮ್ಮಿಯಾಗಿಲ್ಲ. ನವೆಂಬರ್ 1999ರಲ್ಲಿ ಕರೀಂಲಾಲನ ಸಹಪಾಠಿ ಬದ್ರುದ್ದೀನ್ ಖಾನಪುರ ಎಂಬುವವರನ್ನು ನಕಲಿ ಛಾಪಕಾಗದ ವ್ಯವಹಾರದಲ್ಲಿ ಕರೀಂಲಾಲನು ಉಪಯೋಗಿಸಿಕೊಂಡಿರುತ್ತಾನೆ. ದಿನಾಂಕ : 19.8.2000 ರಲ್ಲಿ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಅವನ ಮೇಲೆ ಒಂದು ಪ್ರಕರಣ ದಾಖಲಾಗಿದ್ದು ಸಂ: 542: 2000 ಆಗಿರುತ್ತದೆ. ಅವನೊಂದು ಹೇಳಿಕೆಯನ್ನು ಕೊಡುತ್ತಾನೆ. ಅದೇನೆಂದರೆ ಈ ನಕಲಿ ಛಾಪಾಕಾಗದ ಮಾರಾಟದಿಂದ ಸುಮಾರು 40 ಸಾವಿರದಿಂದ 4 ಲಕ್ಷ ರೂಪಾಯಿಗಳ ಆದಾಯ ಒಂದು ದಿವಸಕ್ಕೆ ಬರುತ್ತಿದೆ ಎಂದು ಹೇಳುತ್ತಾನೆ. ಜೊತೆಗೆ ಆವಾಗಲೇ ಎನ್ ಆರ್ ರಸ್ತೆಯಲ್ಲಿ ಅಮಾನತ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಒಂದು ಖಾತೆಯನ್ನು ತೆರೆದಿರುತ್ತಾರೆ, ಶಿವಾಜಿನಗರದ ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ಪ್ರದೀಪ್ ಕುಮರ್ ಎಂಬುವವರ ಹೆಸರಿನಲ್ಲಿ ಕರೆಂಟ್ ಅಕೌಂಟ್ ತೆರೆದಿರುತ್ತಾರೆ ಮತ್ತೆ ಮಹಮದ್ ರೆಹಾನ್ ಅವರ ಹೆಸರಿನಲ್ಲಿ ಒಂದು ಅಕೌಂಟ್ ಅನ್ನು ತೆಗೆದಿರುತ್ತಾರೆ. ಈ ಅಕೌಂಟ್‌ಗಳಲ್ಲಿ ಎಷ್ಟು ಹಣ ಜಮಾ ಆಗಿದೆ, ಆ ಅಕೌಂಟ್‌ಗಳನ್ನು ಸೀಜ್ ಮಾಡಿ ಏನು ಕ್ರಮ ತೆಗೆದುಕೊಂಡಿದ್ದಾರೆ, ಆ ಅಕೌಂಟ್ ತೆರದದ್ದು ಯಾವಾಗ? ಅದರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ 1999 ನವೆಂಬರ್ ತಿಂಗಳಲ್ಲಿ, ಅಂದರೆ ನಮ್ಮ ಸರ್ಕಾರದ ಅವಧಿ ಅಕ್ಟೋಬರ್ 1999ಕ್ಕೆ ಮುಗಿಯುತ್ತದೆ. ಅಕ್ಟೋಬರ್ 10, 1999 ರಲ್ಲಿ ಇವರು ಅಧಿಕಾರಕ್ಕೆ ಬರುತ್ತಾರೆ. ಅಧಿಕಾರಕ್ಕೆ ಬಂದ ತಕ್ಷಣ ನವೆಂಬರ್ ತಿಂಗಳಲ್ಲಿ ಆ ಕರೀಂಲಾಲ ತನ್ನ ಕಛೇರಿಗಳನ್ನು ಆರಂಭ ಮಾಡುತ್ತಾನೆ. ಜಯನಗರ, ವಸಂತನಗರ ಮತ್ತು ಕಾವಲಭೈರಸಂದ್ರದ ಎರಡು ಮನೆಗಳಲ್ಲಿ ಇದರ ವಹಿವಾಟು ನಕಲಿ ಛಾಪಕಾಗದಗಳನ್ನು ಸ್ಟಾಕ್ ಮಾಡುವುದು ಇದನ್ನು ಪ್ರಾರಂಭ ಮಾಡುತ್ತಾರೆ. ಆ ಮನೆಗಳನ್ನು